ಎಸ್.ಸಿ/ಎಸ್.ಟಿ ಹಿಂದುಳಿದ ವರ್ಗಗಳ ಹಾಸ್ಟೇಲ್‌ಗಳು

121 ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಶ್ರೀ ಡಿ.ಸುಧಾಕರ ಸಮಾಜ ಕಲ್ಯಾಣ ಸಚಿವರು

ಅ) ಹಾಸನ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು ಎಷ್ಟಿವೆ; ಸದರಿ ಹಾಸ್ಟೆಲ್‌ಗಳು ಸ್ವಂತ ಹಾಗೂ ಸುಸಜ್ಜಿತವಾದ ಕಟ್ಟಡಗಳನ್ನು ಹೊಂದಿವೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು; ತಾಲ್ಲೂಕುವಾರು ವಿವರಗಳನ್ನು ನೀಡುವುದು

<u>ಸಮಾಜ ಕಲ್ಯಾಣ ಇಲಾಖೆ</u>

ಹಾಸನ ಜಿಲ್ಲೆಯಲ್ಲಿ 61 ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ಹಾಗೂ 19 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳ ಪೈಕಿ 54 ಮೆಟ್ರಿಕ್ ಪೂರ್ವ ಹಾಗೂ 10 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿದ್ದು, ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿದ್ದು ಸುಸಜ್ಜಿತವಾಗಿರುತ್ತದೆ.

ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ತಾಲ್ಲೂಕುಗಳ ವಿವರ	ವಿದ್ಯಾರ್ಥಿ ನಿಲಯಗಳ ಸಂಖ್ಯೆ			ಸ್ವಂತ ಕಟ್ಟಡ			ಬಾಡಿಗೆ ಕಟ್ಟಡ		
	ಮೆ.ಪೂರ್ವ	ಮೆ.ನಂತರದ	ಒಟ್ಟು	ಮೆ.ಪೂರ್ವ	ಮೆ.ನಂತರದ	ಒಟ್ಟು	ಮೆ.ಪೂರ್ವ	ಮೆ.ನಂತರದ	ಒಟ್ಟು
ಆಲೂರು	2	–	2	2	–	2	–	–	–
ಅರಕಲಗೂಡು	6	1	7	6	1	7	–	–	–
ಅರಸೀಕೆರೆ	10	2	12	10	1	11	–	1	1
ಬೇಲೂರು	10	2	12	8	1	9	2	1	3
ಚನ್ನರಾಯಪಟ್ಟಣ	6	1	7	3	–	3	3	1	4
ಹೊಳೆನರಸೀಪುರ	10	3	13	8	1	9	2	2	4
ಹಾಸನ	12	8	20	12	6	18		2	2
ಸಕಲೇಶಪುರ	5	2	7	5	–	5	–	2	2
ಒಟ್ಟು	61	19	80	54	10	64	7	9	16

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ತಾಲ್ಲೂಕು	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು			ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು		
	ಒಟ್ಟು ನಿಲಯಗಳ ಸಂಖ್ಯೆ	ಸ್ವಂತ ಕಟ್ಟಡಗಳನ್ನು ಹೊಂದಿರುವ ವಿ.ನಿ. ಸಂಖ್ಯೆ	ಬಾಡಿಗೆ ಕಟ್ಟಡ	ಒಟ್ಟು ನಿಲಯಗಳ ಸಂಖ್ಯೆ	ಸ್ವಂತ ಕಟ್ಟಡಗಳನ್ನು ಹೊಂದಿರುವ ವಿ.ನಿ. ಸಂಖ್ಯೆ	ಬಾಡಿಗೆ ಕಟ್ಟಡ
ಹಾಸನ	14	12	2	4	2	2
ಆಲೂರು	3	2	1	–	–	–
ಅರಸೀಕೆರೆ	10	8	2	2	2	–.
ಅರಕಲಗೂಡು	8	6	2	1	–	1
ಬೇಲೂರು	3	2	1	1	–	1
ಸಕಲೇಶಪುರ	6	2	4	1	–	1
ಹೊಳೇನರಸೀಪುರ	16	12	4	6	3	3
ಚನ್ನರಾಯಪಟ್ಟಣ	14	9	5	3	2	1
ಒಟ್ಟು	74	53	21	18	9	9

ಹಾಸನ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ 74 ಮೆಟ್ರಿಕ್ ಪೂರ್ವ ಮತ್ತು 18 ಮೆಟ್ರಿಕ್ ನಂತರ ಹೀಗೆ ಒಟ್ಟು 92 ವಿದ್ಯಾರ್ಥಿನಿಲಯಗಳಿರುತ್ತವೆ.

ಸದರಿ ವಿದ್ಯಾರ್ಥಿನಿಲಯಗಳಲ್ಲಿ 62 ಸ್ವಂತ ಕಟ್ಟಡಗಳನ್ನು ಹೊಂದಿರುತ್ತವೆ 13 ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಹೊಳೆನರಸೀಪುರ – 1
ಅರಸೀಕೆರೆ – 2

ಒಟ್ಟು 3 ಬಾಡಿಗೆ ಕಟ್ಟಡದಲ್ಲಿವೆ.

ಆ) ಎಲ್ಲಾ ಹಾಸ್ಟೆಲ್‌ಗಳಿಗೆ ಸುಸಜ್ಜಿತ ಕಟ್ಟಡಗಳನ್ನು ಯಾವಾಗ ಒದಗಿಸಿಕೊಡಲಾಗುವುದು;

ಸಮಾಜ ಕಲ್ಯಾಣ ಇಲಾಖೆ:

ಬಾಡಿಗೆ ಕಟ್ಟಡಗಳಲ್ಲಿರುವ 16 ಮೆಟ್ರಿಕ್ ಪೂರ್ವ : ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಒಂದು ವಿದ್ಯಾರ್ಥಿನಿಲಯದ ಕಾಮಗಾರಿ ಪ್ರಗತಿಯಲ್ಲಿದೆ. 1 ವಿದ್ಯಾರ್ಥಿನಿಲಯದ ಕಾಮಗಾರಿ ಕೈಗೊಳ್ಳುವ ಹಂತದಲ್ಲಿದೆ. 11 ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳು ಲಭ್ಯವಿದ್ದು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಿಂದ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನಿವೇಶನ ಲಭ್ಯವಿಲ್ಲದ ವಿದ್ಯಾರ್ಥಿನಿಲಯಗಳಿಗೆ ನಿವೇಶನ ಕೈಗೊಳ್ಳುವ ಕ್ರಮ ವಹಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

13 ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ. ಉಳಿದ ಕಟ್ಟಡಕ್ಕೆ ನಿವೇಶನಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಮೇಲ್ಕಂಡ ಹೊಳೆನರಸೀಪುರ ತಾ: ಆನೆಕನ್ನಾಂಬಾಡಿ ಗ್ರಾಮದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯವನ್ನು ಪ್ರಸಕ್ತ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಇನ್ನುಳಿದ 2 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸೂಕ್ತವಾದ ನಿವೇಶನವನ್ನು ಶೀಘ್ರವಾಗಿ ಪಡೆದು ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ ಸದರಿ ಹಾಸ್ಟೆಲ್‌ಗಳಲ್ಲಿ ಮಂಜೂರಾತಿಯಾದ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಸಮಾಜ ಕಲ್ಯಾಣ ಇಲಾಖೆ:

ಸದರಿ ಹಾಸ್ಟೆಲ್‌ಗಳಲ್ಲಿ ಮಂಜೂರಾತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ:

		ವಾರ್ಡನ್	ಅಡುಗೆಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು	ಒಟ್ಟು ಹುದ್ದೆಗಳು	ಷರಾ
ಮೆಟ್ರಿಕ್ ಪೂರ್ವ ವಿ. ನಿಲಯಗಳು	ಮಂಜೂರಾತಿ	67	139	79	18	303	ಖಾಲಿ ಇರುವ ಅಡುಗೆಯವರು: ಅಡುಗೆ ಸಹಾಯಕರನ್ನು ಹೊರ ಸಂಪನ್ಮೂಲದ ಮುಖಾಂತರ ಸಿಬ್ಬಂದಿಯನ್ನು ಪಡೆದು ವಿ.ನಿಲಯಗಳನ್ನು ನಡೆಸಲಾಗುತ್ತಿದೆ. ಮೇಲ್ವಿಚಾರಕರನ್ನು ತಾತ್ಕಲಿಕವಾಗಿ ನಿಯೋಜನೆ ಮೇರೆ ನೇಮಿಸಿ ವಿ.ನಿಲಯಗಳನ್ನು ನಡೆಸಲಾಗುತ್ತಿದೆ. ವಾರ್ಡನ್ ವೃಂದದ ನೌಕರರನ್ನು ಖಾಯಂ ಆಗಿ
	ಖಾಲಿ	26	33	32	13	104	
ಮೆಟ್ರಿಕ್ ನಂತರದ ವಿ. ನಿಲಯಗಳು	ಮಂಜೂರಾತಿ	18	37	18	8	81	
	ಖಾಲಿ	13	15	8	7	43	

							ನೇಮಕಾತಿ ಮಾಡಿಕೊಳ್ಳಲು ಕೆ.ಪಿ.ಎಸ್.ಸಿ ರವರಿಗೆ ವಹಿಸಲಾಗಿದ್ದು, ಪ್ರಸ್ತುತ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಹಾಸನ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಒಟ್ಟು 74 ಮೆಟ್ರಿಕ್ ಪೂರ್ವ ಹಾಗೂ 18 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಇರುತ್ತವೆ.

ಸದರಿ ವಿದ್ಯಾರ್ಥಿನಿಲಯಗಳಿಗೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತವೆ.

ಹುದ್ದೆಯ ಹೆಸರು	ಮಂಜೂರಾತಿ ಸಂಖ್ಯೆ	ಭರ್ತಿಯಾಗಿರುವ ಸಂಖ್ಯೆ	ಖಾಲಿ ಹುದ್ದೆಗಳು	ತೆಗೆದುಕೊಂಡ ಕ್ರಮಗಳು
ನಿಲಯ ಪಾಲಕರು	17	2	15	ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹುದ್ದೆಗಳನ್ನು ತುಂಬಲು ಪ್ರಸ್ತಾಪಿಸಿದೆ.
ನಿಲಯ ಮೇಲ್ವಿಚಾರಕರು	70	38	32	
ಅಡುಗೆಯವರು	182	151	31	ಹೊರ ಮೂಲದಿಂದ ಗುತ್ತಿಗೆ ಮೂಲಕ ತುಂಬಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳಿಗೆ ತಿಳಿಸಲಾಗಿದೆ.
ಅಡುಗೆ ಸಹಾಯಕರು	87	42	45	
ಕಾವಲುಗಾರರು	15	6	9	
ಒಟ್ಟು	371	239	132	

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಸದರಿ ಹಾಸ್ಟೆಲ್‌ಗಳಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ:

ಹುದ್ದೆ	ಮಂಜೂರಾತಿ	ಭರ್ತಿ	ಖಾಲಿ
ಮೇಲ್ವಿಚಾರಕರು	03	–	03
ಅಡುಗೆಯವರು	06	–	06
ಅಡುಗೆ ಸಹಾಯಕರು	03	–	03

ಮೇಲ್ಕಂಡಂತೆ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗೆ ನಿಯೋಜನೆ ಮೇರೆಗೆ ಹಾಗೂ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ಪಡೆದು ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಮೇಲ್ವಿಚಾರಕರ ಹುದ್ದೆಗಳ ನೇಮಕಾತಿ ಬಗ್ಗೆ ಕೆಪಿಎಸ್‌ಸಿ ಯಿಂದ ಅರ್ಜಿ ಕರೆಯಲಾಗಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮವಾದ ಆಹಾರ ವಿತರಣೆ ಯಾಗುತ್ತಿಲ್ಲದಿರುವ ಬಗ್ಗೆ ದೂರುಗಳೇನಾದರೂ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಯಾವುದೇ ದೂರುಗಳು ಇರುವುದಿಲ್ಲ.

122 ಶ್ರೀ ಹೆಚ್.ಡಿ. ರೇವಣ್ಣ, ಶಾಸಕರು
ಸಮಾಜ ಕಲ್ಯಾಣ ಸಚಿವರು

ಅ) ಹಾಸನ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಎಷ್ಟು? ಎಲ್ಲಾ ಶಾಲೆಗಳು ಸ್ವಂತ ಹಾಗೂ ಸುಸಜ್ಜಿತವಾದ ಕಟ್ಟಡಗಳನ್ನು ಹೊಂದಿವೆಯೇ? ತಾಲ್ಲೂಕುವಾರು ವಿವರಗಳನ್ನು ನೀಡುವುದು.

ಹಾಸನ ಜಿಲ್ಲೆಯಲ್ಲಿ ಒಟ್ಟು 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇರುತ್ತವೆ. ಈ ವರ್ಷ 5 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 5 ವಸತಿ ಶಾಲೆಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು 4 ವಸತಿ ಶಾಲೆಗಳ ಕಾಮಗಾರಿ ಪ್ರಗತಿಯಲ್ಲಿವೆ. ಆ ಸಂಬಂಧದ ತಾಲ್ಲೂಕು-ವಾರು ವಿವರಗಳನ್ನು ಅನುಬಂಧ-1 ರಲ್ಲಿ ನಮೂದಿಸಲಾಗಿದೆ.

ಆ) ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಸುಸಜ್ಜಿತ ಕಟ್ಟಡಗಳನ್ನು ಯಾವಾಗ ಒದಗಿಸಿಕೊಡಲಾಗುವುದು?

ಅಂತಹ ವಸತಿ ಶಾಲೆಗಳಿಗೆ ನಿವೇಶನ ಲಭ್ಯವಾದ ನಂತರ ಸೂಕ್ತ ಆಯವ್ಯಯ ಒದಗಿಸಿಕೊಂಡು ಶಾಲಾ ಸಂಕೀರ್ಣಗಳನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಇ) ಸದರಿ ಮೊರಾರ್ಜಿ ಶಾಲೆ ಮತ್ತು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಈ ಮೊರಾರ್ಜಿ ದೇಸಾಯಿ ವಸತಿ- ಶಾಲೆಗಳಿಗೆ ಮಂಜೂರಾಗಿರುವ ಹುದ್ದೆಗಳ ಎದುರಿಗೆ ಹೊರಗುತ್ತಿಗೆ ಆಧಾರದ ಮೇಲೆ ನಿಯೋಜನೆ ಮೇಲೆ ಭರ್ತಿ